2052(2297) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2003–04 ಹಾಗೂ 2004–05ನೇ ಸಾಲಿನಲ್ಲಿ ಸಾರಾಯಿ, ಮದ್ಯ ವಿದೇಶಿ ಮದ್ಯ ಹಾಗೂ ಇತ್ಯಾದಿ ಉತ್ಪಾದನೆಗಳಿಂದ ಸರ್ಕಾರಕ್ಕೆ ಬರುವ ಅಬಕಾರಿ ಆದಾಯ ಎಷ್ಟು;

ಆ) 2005–06ನೇ ಸಾಲಿಗೆ ಸರ್ಕಾರ ಅಬಕಾರಿ ಆದಾಯ ಎಷ್ಟು ನಿರೀಕ್ಷೆ ಮಾಡಿದೆ;

ಇ) ಸಾರಾಯಿ ಮತ್ತು ಹೆಂಡದ ಗುತ್ತಿಗೆಗಳನ್ನು ತಾಲ್ಲೂಕುವಾರು ಹರಾಜಿನ ಬದಲಾಗಿ ಪ್ರತಿ ನಗರಸಭೆ ಹಾಗೂ ಗ್ರಾಮ ಪಂಚಾಯತಿಯ ಮುಖಾಂತರ ಹರಾಜು ಮಾಡಲು ಸರ್ಕಾರ ಉದ್ದೇಶಿಸಿದೆಯೇ;

ಈ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು):

ಅ) ರಾಜ್ಯದಲ್ಲಿ 2003–04 ಹಾಗೂ 2004–05ನೇ ಸಾಲಿನಲ್ಲಿ ಸಾರಾಯಿ, ಮದ್ಯ, ವಿದೇಶಿ ಮದ್ಯ ಹಾಗೂ ಇತ್ಯಾದಿ ಉತ್ಪಾದನೆಗಳಿಂದ ಸರ್ಕಾರಕ್ಕೆ ಬಂದಿರುವ ಅಬಕಾರಿ ಆದಾಯದ ವಿವರ ಈ ಕೆಳಗಿನಂತಿರುತ್ತದೆ:

(ಕೋಟಿ ರೂ.ಗಳಲ್ಲಿ)

	2003–04	2004–05 (ಫೆಬ್ರವರಿ ಅಂತ್ಯದವರೆಗೆ)
ಸಾರಾಯಿ	1037.21	903.59
ಮದ್ಯ	1000.23	958.48
ಬಿಯರ್	169.02	158.85
ಇತರೆ	158.44	243.51
ಒಟ್ಟು	**2364.90**	**2264.43**

ಆ) 2005–06ನೇ ಸಾಲಿಗೆ ಸರ್ಕಾರ ಸುಮಾರು 3025 ಕೋಟಿ ರೂ.ಗಳ ಆದಾಯ ನಿರೀಕ್ಷಿಸಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

2053(2298) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಾಲ್ಕು ಪಥ, ಆರು ಪಥ ಮತ್ತು ಎಂಟು ಪಥಗಳ ರಸ್ತೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿಸಿದೆಯೇ;